ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

| | | |
|---|---|---|
| ಸಾಕ್ಷಿಯ ಹೆಸರು | :- | ನಂದಿತಾ ವಾಮನ್ ಹಳ್ದಂಕರ್ |
| ತಂದೆ/ಗಂಡನ ಹೆಸರು | :- | ಶಿವಶಂಕರ್ ಆರಾಧ್ಯ |
| ವಯಸ್ಸು | :- | 35 ವರ್ಷ |
| ಉದ್ಯೋಗ | :- | ಅಬಕಾರಿ ನಿರೀಕ್ಷಕರು |
| ವಾಸಸ್ಥಳ | :- | ಮೈಸೂರು |

(ಸಾಕ್ಷಿಗೆ ದಿನಾಂಕಃ 11-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು ದಿ 08-06-2023 ರಿಂದ ದಿ 13-06-2024 ರವರೆಗೆ ಮದ್ದೂರು ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ 30-06-2023 ರಂದು ಈ ಕೇಸಿನ ಕಡತವನ್ನು ಪ್ರೇಮಸಾಗರ್ ಎಂಬ ತನಿಖಾಧಿಕಾರಿಯಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ದಿ 02–08–2023 ರಂದು ಚಾಸಾ–2 ರಿಂದ 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.ದಿ 24–08–2023 ರಂದು ಎಫ್ ಎಸ್ ಎಲ್ ವರದಿ ಯನ್ನುಪಡೆದಿರುತ್ತೇನೆ. ಸಾಕ್ಷಿಯು ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಎಂದು ಗುರುತಿಸಲಾಯಿತು. ದಿ 08–09–2023 ರಂದು ಕೃತ್ಯ ನಡೆದ ಸ್ಥಳದ ಮಾಲೀಕತ್ವದ ದಾಖಲಾತಿಯನ್ನು ನೀಡುವಂತೆ ನಿಡಪಘಟ್ಟ ಗ್ರಾಮಪಂಚಾಯಿತಿಗೆ ಪತ್ರ ನಿವೇದಿಸಿಕೊಂಡಿದ್ದೆನು. ದಿ 15–09–2023 ಸದರಿಯವರು ವರದಿ ನೀಡಿದ್ದು, ವರದಿಯೊಂದಿಗೆ ಡಿಮ್ಯಾಂಡ್ ರಿಜಿಸ್ಟರ್ ನ್ನು ನೀಡಿದ್ದು, ಆರೋಪಿಯವರು ಮಾಲೀಕರು ಎಂದು ವರದಿ ನೀಡಿರುತ್ತಾರೆ. ಸದರಿ ನಿವೇದನೆ ಮತ್ತು ವರದಿಯನ್ನು ನಿಪಿ–6 ಮತ್ತು ನಿಪಿ–7 ಮತ್ತು ಡಿಮ್ಯಾಂಡ್ ರಿಜಿಸ್ಟರ್ ನ್ನು ನಿಪಿ–8 ಎಂದು ಗುರುತಿಸಲಾಯಿತು. ದಿ

30-09-2023 ರಂದು ಆರೊಪಿಗೆ ನೋಟೀಸ್ ನೀಡಲಾಯಿತು. ದಿ 10-10-2023 ರಂದು ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಅದೇದಿನ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೆನೆ.

ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎಂ ಕೆಪಿ ವಕೀಲರಿಂದಃ

ದಿ 02-08-2023 ರಂದು ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ಪಡೆದಿರುವುದಾಗಿ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೆನೆಂದರೆ ಸರಿಯಲ್ಲ. ಎಫ್ ಎಸ್ ಎಲ್ ವರದಿ ಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೆನೆಂದರೆ ಸರಿಯಲ್ಲ. ನಿಪಿ-6 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೆನೆಂದರೆ ಸರಿಯಲ್ಲ. ಅಂಗಡಿ ನಡೆಸಲು ಗ್ರಾಮ ಪಂಚಾಯಿತಿಯವರು ಲೈಸೆನ್ಸ್ ನೀಡಿರುವುದಿಲ್ಲ. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.ಆರೋಪಿ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಕೂಡ ಅವರ ವಿರುದ್ಧ ಸುಳ್ಳು ಅಂತಿಮ ವರದಿ ತಯಾರಿಸಿದ್ದೆನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗಾಗಿ ಸುಳ್ಳು ಅಂತಿಮ ವರದಿ ತಯಾರಿಸಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ